**ಓ.ಎಸ್. ನಂ. 339/2024**

**ಪಿ.ಡಬ್ಲ್ಯು-1**

ದಿನಾಂಕ 21/06/2025 ರಂದು ಸಾಕ್ಷಿಯನ್ನು ಕರೆಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಎಚ್.ಆರ್.ಎಸ್. ವಕೀಲರಿಂದ**

ನಾನು ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ನಾನು ನನ್ನ ದಾವೆಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಸರ್ವೆ ನಂ. 101/5 ರ ಪಹಣಿಯನ್ನು ನಿಪಿ-1, ಸರ್ವೆ ನಂ.101/6 ರ ಪಹಣಿಯನ್ನು ನಿಪಿ-2, ಸರ್ವೆ ನೋಟೀಸಿನ ದೃಢೀಕೃತ ನಕಲನ್ನು ನಿಪಿ-3, ಸರ್ವೆ ಮಹಜರ್ ನ ದೃಢೀಕೃತ ನಕಲನ್ನು ನಿಪಿ-4, ಸರ್ವೆ ಹದ್ದುಬಸ್ತು ನಕ್ಷೆಯ ದೃಢೀಕೃತ ನಕಲನ್ನು ನಿಪಿ-5, ಲೀಗಲ್ ನೋಟೀಸನ್ನು ನಿಪಿ-6, ಅಂಚೆ ಸ್ವೀಕೃತಿಯನ್ನು ನಿಪಿ-7, ದಿನಾಂಕ 15/10/2014 ರ ಪಾಲು ವಿಭಾಗ ಪತ್ರದ ಮೂಲ ಪ್ರತಿಯನ್ನು ನಿಪಿ-8 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿದ ಪರಿಹಾರವನ್ನು ನೀಡಬೇಕಾಗಿ ಕೋರುತ್ತೇನೆ.

**(ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

*ಓ.ಹೇ.ಕೇ. ಸರಿಯಿದೆ.*

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.**